MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

| Vol.46 | No:30 | ENGLISH DAILY | Subscription Yearly - Rs. - | FRIDAY | 20-8-2021 |
|---|---|---|---|---|---|

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಅಂತರಾಷ್ಟ್ರೀಯ ಸಕ್ಕರೆ ದರ ಹೆಚ್ಚಳವಿರುವುದು ರಫ್ತು ಉತ್ತೇಜಕ

2022 ರ ಸೀಜನ್ ನಲ್ಲಿ ಸಕ್ಕರೆ ರಫ್ತು ಉತ್ತೇಜನ ಗಳಿಸಬಹುದೆಂದು ICRA ಅನಿಸಿಕೆ. ಅಂತರಾಷ್ಟ್ರೀಯ ದರ ಹೆಚ್ಚಳವಿರುವುದು ರಫ್ತಿಗೆ ಸಹಕಾರಿಯಾಗಲಿದೆಯೆನ್ನಲಾಗಿದೆ.

## ಪಾಮ್ ಕೃಷಿ ಬಲಪಡಿಸಲು ಕೇಂದ್ರ ರೂ. 11040 ಕೋಟಿಯ ಯೋಜನೆ

ದೇಶದ ಖಾದ್ಯ ತೈಲ ಆಮದು ಅವಲಂಬನೆಯನ್ನು ಕಡಿತಗೊಳಿಸಿ ಸ್ವಾವಲಂಬಿಯಾಗಲು ಕೇಂದ್ರ ಸರಕಾರ ಪಾಮ್ ಕೃಷಿಗೆ ರೂ. 11040 ಕೋಟಿಯ ಯೋಜನೆಯನ್ನು ಅನುಮೋದಿಸಿದೆಯೆನ್ನಲಾಗಿದೆ.

## ವಿಯೆಟ್ನಾಂ ನಿಂದ ಯುಎಇ ಗೆ ಗೋಡಂಬಿ ರಫ್ತು 200 ಶೇಕಡಾ ಹೆಚ್ಚಳ

2021 ರ ಪ್ರಥಮ 7 ತಿಂಗಳಲ್ಲಿ ಯುಎಇ ಗೆ ವಿಯೆಟ್ನಾಂ ನಿಂದ US $ 23 ಮಿಲಿಯನ್ ರಫ್ತು, 200 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ.

## 2020–21 ರಲ್ಲಿ 20 ಲಕ್ಷ ಟನ್ ಸಕ್ಕರೆ ಇಥೆನಾಲ್ ಉತ್ಪಾದನೆಗೆ ಬಳಕೆಯಾಗುವ ಅಂದಾಜು

2018–19, 2019–20 ರ ಸಕ್ಕರೆ ಸೀಜನ್ ಗಳಲ್ಲಿ ಕ್ರಮವಾಗಿ 3 ಲಕ್ಷ ಟನ್ ಹಾಹು 9 ಲಕ್ಷ ಟನ್ ಸಕ್ಕರೆ ಇಥೆನಾಲ್ ಉತ್ಪಾದಿಸಲು ಬಳಕೆಯಾಗಿದೆಯೆನ್ನಲಾಗಿದ್ದು 2020–21 ನೇ ಸೀಜನ್ ನಲ್ಲಿ 20 ಲಕ್ಷ ಟನ್ ಸಕ್ಕರೆ ಇಥೆನಾಲ್ ಉತ್ಪಾದಿಸಲು ಬಳಕೆಯಾಗಬಹುದೆನ್ನಲಾಗಿದೆ. ಹೆಚ್ಚುವರಿ ಕಬ್ಬು ಇಥೆನಾಲ್ ಉತ್ಪಾದಿಸಲು ಹಾಗೂ ಹೆಚ್ಚುವರಿ ಸಕ್ಕರೆ ರಫ್ತು ಮಾಡಲು ಉತ್ತೇಜಿಸುವುದರಿಂದ ಹೆಚ್ಚುವರಿ ದಾಸ್ತಾನು ಹೊಂದುವುದನ್ನು ಸರಿದೂಗಿಸಬಹುದೆನ್ನಲಾಗಿದೆ.